CCE PF
REVISED

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SECONDARY EDUCATION EXAMINATION BOARD, MALLESWARAM, BANGALORE – 560 003

ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2018

S.S.L.C. EXAMINATION, MARCH / APRIL, 2018

ಮಾದರಿ ಉತ್ತರಗಳು

MODEL ANSWERS

ದಿನಾಂಕ : 28. 03. 2018] ಪರಿಷ್ಕೃತ ಪರಿಷ್ಕೃತ ಸಂಖ್ಯೆ : **33-K**

Date : 28. 03. 2018] **CODE NO. : 33-K**

—

Subject : Second Language — KANNADA

/ New Syllabus

/ Private Fresh

[: 100

[Max. Marks : 100

1.		14 × 1 = 14
2.		
3.		

ಪ್ರಭಾವದಿಂದ ಕುಗ್ಗಿರಬಹುದು. ಮನುಷ್ಯನ ಮನಸ್ಸಿನಲ್ಲಿ ಒಳಿತು ಕೆಡಕುಗಳ ಮೇಲಾಟ ನಿರಂತರ ಸಾಗುತ್ತಲೇ ಇರುತ್ತದೆ. ಆದರೆ ಸದ್ಗುಣ, ಪ್ರೇಮ, ನೀತಿಯ ಬಗ್ಗೆ ಗೌರವ ಇವು ಮನುಷ್ಯನ ಅಂತರಾಳದಲ್ಲಿ ಇದ್ದೇ ಇರುತ್ತವೆ. ಯಾವ ಮನುಷ್ಯನೂ ಮೂಲತಃ ದುರ್ಗುಣಿ ಅಥವಾ ಕಠೋರನಾಗಿರಲಾರ. ರವೀಂದ್ರನಾಥ ಠಾಕೂರರು ಒಂದೆಡೆ ಹೇಳುತ್ತಾರೆ. "ವ್ಯಕ್ತಿಗಳು ಕ್ರೂರರಾಗಿರಬಹುದು; ಆದರೆ ಮಾನವ ಮಾತ್ರ ಕರುಣಾಮಯಿ" ಎಂದು. ಸುಪ್ತಸದ್ಗುಣ ಹಾಗೂ ಸದ್ಗುಣ ಪ್ರೇಮ ಇವುಗಳನ್ನು ಚೇತರಿಸಲು ಸದಾ ಯತ್ನಿಸಬೇಕು. ಒಂದು ಕಾಲದಲ್ಲಿ ಸದ್ಗುಣಿಗೆ ಗೌರವ ಸಲ್ಲುತ್ತಿತ್ತು. ಮತ್ತೊಂದು ಕಾಲದಲ್ಲಿ ಶ್ರೀಮಂತನಿಗೆ ಗೌರವ ಸಲ್ಲುತ್ತಿತ್ತು. ಈಗಿನ ಕಾಲದಲ್ಲಿ ಮನುಷ್ಯನ ಗೌರವವನ್ನು ಆತನ ಬ್ಯಾಂಕಿನಲ್ಲಿಯ ಹಣ, ಅವನು ವಾಸಿಸುವ ಮನೆ, ಅವನು ಓಡಾಡುವ ವಾಹನ ಇವುಗಳ ಮೇಲೆ ನಿರ್ಣಯಿಸುವ ಪ್ರವೃತ್ತಿ ಕಂಡುಬರುತ್ತಿದೆ. ಇದು ಒಳ್ಳೆಯ ಲಕ್ಷಣವಲ್ಲ. ದಯೆ, ಪರೋಪಕಾರ, ಕರುಣೆ ಈ ಸದ್ಗುಣಗಳು ನಾವು ವಾಸಿಸುವ ಭೂಮಿಯನ್ನೇ ಸ್ವರ್ಗವನ್ನಾಗಿ ಮಾರ್ಪಡಿಸಬಲ್ಲವು. ಈ ಗುಣಗಳನ್ನು ಬೆಳೆಸಿಕೊಂಡಾಗ ಮನುಷ್ಯನ ಮನಸ್ಸಿಗೆ ನೆಮ್ಮದಿ, ಸುಖ, ಶಾಂತಿ, ಸಮಾಧಾನ ಉಂಟಾಗುತ್ತದೆ.

39. ಈಗ ಮನುಷ್ಯನ ಗೌರವವನ್ನು ಯಾವ ವಿಷಯಗಳಿಂದ ಅಳೆಯುತ್ತಾರೆ ?

ಈಗ ಮನುಷ್ಯನ ಗೌರವವನ್ನು ಆತನ ಬ್ಯಾಂಕಿನಲ್ಲಿಯ ಹಣ, ಅವನು ವಾಸಿಸುವ ಮನೆ, ಓಡಾಡುವ ವಾಹನದಿಂದ ಅಳೆಯುತ್ತಾರೆ.

40. ರವೀಂದ್ರನಾಥ ಠಾಕೂರರು ಮಾನವತೆ ಬಗ್ಗೆ ಏನು ಹೇಳಿದ್ದಾರೆ ?

ರವೀಂದ್ರನಾಥ ಠಾಕೂರರು "ವ್ಯಕ್ತಿಗಳು ಕ್ರೂರರಾಗಿರಬಹುದು; ಆದರೆ ಮಾನವ ಮಾತ್ರ ಕರುಣಾಮಯಿ" ಎಂದಿದ್ದಾರೆ

41. ನಾವು ವಾಸಿಸುವ ಭೂಮಿಯನ್ನು ಸ್ವರ್ಗವನ್ನಾಗಿಸುವ ಶಕ್ತಿ ಯಾವ ಸದ್ಗುಣಗಳಿಗಿವೆ ?

ನಾವು ವಾಸಿಸುವ ಭೂಮಿಯನ್ನು ಸ್ವರ್ಗವನ್ನಾಗಿಸುವ ಶಕ್ತಿ ದಯೆ, ಪರೋಪಕಾರ, ಕರುಣೆ ಈ ಸದ್ಗುಣಗಳಿಗಿವೆ.

42. ಮನುಷ್ಯನ ಮನಸ್ಸಿನಲ್ಲಿ ಯಾವುದರ ಹೋರಾಟ ನಿರಂತರವಾಗಿ ನಡೆಯುತ್ತಿದೆ ?

ಮನುಷ್ಯನ ಮನಸ್ಸಿನಲ್ಲಿ ಒಳಿತು ಕೆಡಕುಗಳ ಮೇಲಾಟ ನಿರಂತರವಾಗಿ ನಡೆಯುತ್ತಲೇ ಇರುತ್ತದೆ.

'ಬಿ'

ಬಹು ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : $12 \times 1 = 12$

43. 'ಸಲೀಮನು ಶಾಲೆಗೆ ಹೋದನು' ³ ವಾಕ್ಯವು ಈ ಕಾಲದಲ್ಲಿದೆ.
(ಬಿ) ಭೂತಕಾಲ

44. ಕ್ರಿಯಾಸಮಾಸಕ್ಕೆ ಈ ಪದವು ಉದಾಹರಣೆಯಾಗಿದೆ
(ಸಿ) ಮೈಕೊಡವಿ

45. 'ಸಂತೆ ಹಾದಿಲ್ ಕಲ್ಲುಕಟ್ಟೆ' ಇಲ್ಲಿನ 'ಹಾದಿಲ್' ಪದದ ಗ್ರಾಂಥಿಕ ರೂಪ
(ಡಿ) ಹಾದಿಯಲ್ಲಿ

46. 'ಮಗುವಿನ ಮುಖವು ಚಂದ್ರನಂತೆ ಮನೋಹರವಾಗಿದೆ' ³ ಈ ವಾಕ್ಯದಲ್ಲಿರುವ ಅಲಂಕಾರ
(ಎ) ಉಪಮಾಲಂಕಾರ

47. 'ಪಂಚಾಕ್ಷರಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
(ಎ) ಸವರ್ಣದೀರ್ಘ ಸಂಧಿ

48. ಇವುಗಳಲ್ಲಿ 'ಸಾಮಾನ್ಯ ಅವ್ಯಯ'ಕ್ಕೆ ಉದಾಹರಣೆ
(ಬಿ) ಚೆನ್ನಾಗಿ

49. 'ಮೊತ್ತಮೊದಲು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ
(ಸಿ) ದ್ವಿರುಕ್ತಿ

50. 'ಗಳಿಗೆ' ಪದದ ತತ್ಸಮ ರೂಪ
(ಡಿ) ಘಟಿಕಾ

51. 'ಗಿಡ, ಮರ, ಬೆಟ್ಟ' ³ ಇವು ಈ ನಾಮವಾಚಕಗಳಿಗೆ ಉದಾಹರಣೆ
(ಎ) ರೂಢನಾಮ

52. ಇವುಗಳಲ್ಲಿ ಐದು ಮಾತ್ರೆಗಳಿಂದ ಕೂಡಿದ ಪದ
(ಬಿ) ಕಾವೇರಿ

53. 'ರುಚಿಯನ್ನು' ಪದದಲ್ಲಿರುವ ವಿಭಕ್ತಿ
(ಬಿ) ದ್ವಿತೀಯಾ

54. 'ತಕರಾರು' ಪದದ ಸಮಾನಾರ್ಥಕ ಪದ
(ಡಿ) ಆಕ್ಷೇಪಣೆ

55.	**ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** * ಮನಸ್ಸಿದ್ದರೆ ಮಾರ್ಗ * ಹಾಸಿಗೆ ಇದ್ದಷ್ಟು ಕಾಲು ಚಾಚು * ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ	1 × 3 = 3
	ಗಾದೆಯ ಮಹತ್ವದ ವಿವರಣೆ	1
	ಗಾದೆಯ ಅರ್ಥ ವಿವರಣೆ	1
	ಭಾಷಾಶೈಲಿಗೆ, ಪದಬಳಕೆಗೆ	1
		3
56.	**ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**	1 × 4 = 4
	ನಿಮ್ಮನ್ನು ನಂಜನಗೂಡಿನ ಸರ್ಕಾರಿ ಪ್ರೌಢಶಾಲೆಯ 'ಅಭಿನವ್' ಎಂದು ಭಾವಿಸಿಕೊಂಡು, ನಿಮ್ಮ ಶಾಲಾ ಶೈಕ್ಷಣಿಕ ಚಟುವಟಿಕೆಗಳನ್ನು ಕುರಿತು ಮೈಸೂರು ಜಿಲ್ಲೆಯ ಬಟ್ಟದ ತುಂಗಾ ಶಾಲೆಯಲ್ಲಿರುವ ಗೆಳೆಯ 'ಪ್ರಣವ್'ಗೆ ಒಂದು ಪತ್ರ ಬರೆಯಿರಿ.	
	ನಿಮ್ಮನ್ನು ಮೈಸೂರಿನ ಅಶೋಕ ರಸ್ತೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಯ 'ಅಪೂರ್ವ' ಎಂದು ಭಾವಿಸಿಕೊಂಡು, ನಿಮ್ಮ 'ವ್ಯಾಸಂಗ ದೃಢೀಕರಣ ಪತ್ರ'ವನ್ನು ನೀಡುವಂತೆ ಕೋರಿ ಶಾಲೆಯ ಮುಖ್ಯಶಿಕ್ಷಕರಿಗೊಂದು ಮನವಿ ಪತ್ರ ಬರೆಯಿರಿ.	
	ವೈಯಕ್ತಿಕ ಪತ್ರ :	
	ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ	1 ಅಂಕ
	ಪತ್ರದ ಒಡಲು	2 ಅಂಕಗಳು
	ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ	1 ಅಂಕ
	ಒಟ್ಟು	4 ಅಂಕಗಳು
	ವ್ಯಾವಹಾರಿಕ ಪತ್ರ :	
	ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ	1 ಅಂಕ
	ಪತ್ರದ ಒಡಲು	2 ಅಂಕಗಳು
	ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ	1 ಅಂಕ
	ಒಟ್ಟು	4 ಅಂಕಗಳು

57.	**ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)**	1 × 4 = 4
	* ಜಲಸಂರಕ್ಷಣೆ	
	* ಬಾಲ್ಯವಿವಾಹ ಒಂದು ಸಾಮಾಜಿಕ ಪಿಡುಗು	
	* ದೂರದರ್ಶನದಿಂದಾಗುವ ಪ್ರಯೋಜನಗಳು	
	ಪೀಠಿಕೆ / ಪ್ರಸ್ತಾವನೆ	1 ಅಂಕ
	ವಿಷಯ ನಿರೂಪಣೆ, ಭಾಷಾಶೈಲಿಗೆ	2 ಅಂಕಗಳು
	ಮುಕ್ತಾಯ / ಉಪಸಂಹಾರ	1 ಅಂಕ
	ಒಟ್ಟು	4 ಅಂಕಗಳು